

ದಾರಿಯನ್ನು ಹಿಡಿದ ಮಂಜುವಿಗೆ ಅಧಿಕಾರಿಯನ್ನು ಒಪ್ಪಿಸಿ ಅದನ್ನು ಖುಲಾಸೆಗೊಳಿಸುವುದೆಂದು ನಿರ್ಧರಿಸಿ ಬಂದ. ಅಧಿಕಾರಿ ಮೊದಲೇ ಲೆಕ್ಕ ಹಾಕಿದಂತೆ ಇಂತಿಷ್ಟೆಂದು ಸ್ಪಷ್ಟಪಡಿಸಿದ. ಈಗಾಗಲೇ ಆಕೆಗೆ ತಿಂಗಳು ಭರ್ತಿಯಾಗಿರುವುದರಿಂದ ಅದನ್ನು ಮುಂದೂಡುವ ಪ್ರಶ್ನೆಯೇ ಇಲ್ಲವೆಂದು ಅದನ್ನು ಅವಳಿಗೆ ಠಾಣೆಯಲ್ಲಿಯೇ ತಂದು ಒಪ್ಪಿಸಬೇಕೆಂದು ಒಂದು ಕೊನೆಯ ದಿನಾಂಕವನ್ನು ಹೇಳಿದ. ಮಂಜು ಸೋತ ಹೆಜ್ಜೆಗಳೊಂದಿಗೆ ಹಿಂತಿರುಗಿದ. ಒಮ್ಮೆ ಅದನ್ನು ಕೊಟ್ಟು ಮುಗಿಸಿದರೆ ತನ್ನ ಹಾಗೂ ಅವಳ ಸಂಬಂಧ ಮುಗಿದುಹೋಗುತ್ತದೆಯೆನ್ನುವ ಭರವಸೆಯಿಂದ ಅಧಿಕಾರಿ ಹೇಳಿದ ಮೊತ್ತವನ್ನು ಒಟ್ಟು ಸೇರಿಸಿ ಅವನ ಸಮ್ಮುಖದಲ್ಲಿಯೇ ಕೊಟ್ಟು ಮುಗಿಸಿದ.

ಎಷ್ಟೇ ಹಪಹಪಿಸಿದರೂ ಮುಗಿಯದ ಯುದ್ಧದಂತೆ ಸಂಬಂಧಗಳು. ಮುಗಿಯಿತೆಂದರೆ ಮತ್ತೊಂದು ಯುದ್ಧ. ಹೀಗೆ ಸಂಕೀರ್ಣವೇ ಹೊರತು ಸಾಧುವಲ್ಲವೆನ್ನುವುದು ಪ್ರತ್ಯಕ್ಷಳಂತೆ ಮಂಜುವಿಗೂ ಮನದಟ್ಟಾಯಿತು. ಅವನೇನೋ ದುಡ್ಡು ಕೊಟ್ಟು ಕೈತೊಳೆದುಕೊಂಡನಾದರೂ ಆ ಕಹಿ ನೆನಪುಗಳು ಅವನ ಎದೆಯಲ್ಲಿ ಅಚ್ಚೊತ್ತಿ ಕೂರುವಂತೆ ಪ್ರತ್ಯಕ್ಷಳಿಗೆ ಜನಿಸಿದ ಮಗು ನೂರುಶತಃ ಮಂಜುವನ್ನೇ ಹೋಲುತ್ತಿತ್ತು. ಈ ಸುದ್ದಿ ಯಾರಿಂದಲೋ ಮಂಜುವಿಗೆ ತಿಳಿಯುತ್ತಲೇ ಮುಂದೆ ಇದೇ ಒಂದು ದೊಡ್ಡ ರಾದ್ಧಾಂತವಾಗುವುದರಲ್ಲಿ ಸಂದೇಹವಿಲ್ಲವೆನಿಸಿತು. ಜೊತೆಗೆ ಭಯವೂ ಮೂಡಿತು. ಇದಕ್ಕಿನ್ನು ಪರಿಹಾರವೇನು? ಉತ್ತರ ಕಾಣದ ಪ್ರಶ್ನೆಯೊಂದು ಅವನ ತಲೆಯನ್ನು ಕೊರೆಯುತ್ತಿತ್ತು. ಅವನು ಕಣ್ಣು ಮುಚ್ಚಿ ಮಲಗಿದರೂ ನಿದ್ದೆ ಬಾರದ ದಿನಗಳು ಎದುರಾದವು. ರಾತ್ರಿ ಕಣ್ಣಿಗೆ ನಿದ್ದೆ ಹಿಡಿಯಿತೆನ್ನುವಷ್ಟರಲ್ಲಿಯೇ ಅದ್ಭುತವಾದ ಯೋಜನೆಯೊಂದು ಹೊಳೆಯಿತು. ಎದ್ದು ಕುಳಿತು ಯೋಚಿಸಿದ. ಪ್ರತ್ಯಕ್ಷಳ ಜೊತೆಗೆ ಮತ್ತೆ ಹಳೇ ಒಪ್ಪಂದವನ್ನು ಮುಂದುವರೆಸುವುದು, ಎದುರಾದ ಸಂಕಷ್ಟವನ್ನು ಸುಲಭದಲ್ಲಿ ಪರಿಹರಿಸುವ ಕ್ರಿಮಿನಲ್ ಯೋಜನೆ. ಆರು ತಿಂಗಳು ಕಳೆಯುತ್ತಲೇ ಅವನು ಅವಳ ಮನೆ ಬಾಗಿಲು ತಟ್ಟಿದ.

ಬಾಗಿಲು ತೆರೆದವನು ಪ್ರತ್ಯಕ್ಷಳ ಗಂಡ ಮಿಲಿಟರಿ ಸಾಹೇಬ ಪುನ್ನಾರಿ. ನೋಡಲೂ ಕ್ರೂರಿಯಂತೆ ಕಂಡರೂ ಮನಸ್ಸು ಮೃದು. ಸೇವೆಯಲ್ಲಿರುವಾಗಲೇ ಪುರುಷತ್ವವನ್ನು ಕಳೆದುಕೊಂಡು ಸ್ವನಿವೃತ್ತಿಯಿಂದ ಹಿಂತಿರುಗಿದ್ದ. ಈಗ ಕಾಯಕವೇ ಕೈಲಾಸವೆಂದು ತಿಳಿದುಕೊಂಡು ತಾನಾಯಿತು ತನ್ನ ಕೆಲಸವಾಯಿತು ಎಂದುಕೊಂಡು ಸಮಾಧಾನಚಿತ್ತದಿಂದ ಇರುತ್ತಿದ್ದವನು ಮಂಜುವನ್ನು ನೋಡಿ, ‘ಯಾರು?’ ಎಂದು ವಿಚಾರಿಸಿದ. ಮಂಜು ಸತ್ಯ ಮುಚ್ಚಿಟ್ಟು ಇನ್ನೇನೋ ಸಬೂಬು ಹೇಳಿದ. ಪ್ರತ್ಯಕ್ಷ ಮಗುವಿನ ಲಾಲನೆ ಪಾಲನೆಯಲ್ಲಿ ತೊಡಗಿದ್ದಳು. ಹೊರಗೆ ನಡೆಯುತ್ತಿದ್ದ ಸಂಭಾಷಣೆ ಕೇಳಿಸಲೇ ಇಲ್ಲ. ಪುನ್ನಾರಿಯೂ ಹೇಳಲು ಇಲ್ಲ. ಮಂಜು ತಾನು ಬಂದ ಸಮಯ ಸರಿಯಿಲ್ಲವೆಂದು ಹೊರಟು ಹೋದ. ಆದರೆ